**OS- 207/2019 P.W.1**

ದಿನಾಂಕಃ11.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ</u> ಪ್ರತಿವಾದಿಯ ಪರ ವಕೀಲರಿಂದ ಃ-

1 ನೇ ಪ್ರತಿವಾದಿಯ ಆಸ್ತಿಗೂ ಹಾಗೂ ನಮ್ಮ ಕುಟುಂಬಕ್ಕೆ ಸೇರಿದ 10 ಎಕರೆ ಜಮೀನಿಗೂ ಯಾವುದೇ ರೀತಿಯ ಸಂಬಂಧ ಇಲ್ಲ. ನನ್ನ ವಾದಪತ್ರದಲ್ಲಿ ವಿಜಯ ಪ್ರಸಾದ್ ರವರು ದಾವಾ ಆಸ್ತಿಯ ಚಕ್ಕುಬಂದಿಯನ್ನು ನಮೂದು ಮಾಡಿ ಬರೆದುಕೊಟ್ಟಿರುವ ವಿಚಾರ ನಾನು ವಾದಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ನಿಪಿ1 ರ ದಾಖಲಾತಿಯನ್ನು 1 ರಿಂದ 4 ನೇ ಪ್ರತಿವಾದಿಯರು ವಿಭಾಗ ಮಾಡಿಕೊಟ್ಟಿರುವ ದಾಖಲೆ ಎಂದರೆ ಸರಿ. ಪಾಲುಪಾರಿಕತ್ತು ನಲ್ಲಿ ನಮೂದು ಮಾಡಿರುವ ಸ್ವತ್ತುಗಳು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮಗೆ ಪಾಲುಪಾರಿಕತ್ತು ಮುಖಾಂತರ ಬಂದಿರುವ ಸ್ವತ್ತನ್ನು ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಪಾಲುಪಾರಿಕತ್ತು ಮುಖಾಂತರ ಸರ್ವೇ ನಂಬರ್ 180 ರಲ್ಲಿ 2 ಎಕರೆ ಜಮೀನಿನ ಸ್ವತ್ತು ಬಂದಿರುತ್ತದೆ. ನಿಪಿ2 ರಂತೆ ಸರ್ವೇ ನಂಬರ್ 69 ರ ಆಸ್ತಿಯನ್ನು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಸದರಿ ಸರ್ವೇ ನಂಬರ್ ಈಗ 180 ಆಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಪಿ2 ರಂತೆ ಸರ್ವೇ ನಂಬರ್ 69 ರಲ್ಲಿ ನಮೂದು ಮಾಡಿರುವ 2 ಎಕರೆ ಜಮೀನನ್ನು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಶೆಡ್ಯೂಲ್ ನ ಎಫ್ ಶೆಡ್ಯೂಲ್ ಸ್ವತ್ತು ಸರ್ವೇ ನಂಬರ್ 69 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ಸದರಿ ಸರ್ವೇ ನಂಬರ್ ಈಗ 180 ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 69 ಸ್ವತ್ತು ಈಗ ಸರ್ವೇ ನಂಬರ್ 180 ಆಗಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಿಪಿ3 ರಿಂದ 6 ರ ದಾಖಲಾತಿಗಳು ಸರ್ವೇ ನಂಬರ್ 69 ಕ್ಕೆ

ಸಂಬಂಧಿಸಿದ ದಾಖಲೆ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ಸದರಿ ಸರ್ವೇ ನಂಬರ್ ಈಗ 180 ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ2 ರ ದಾಖಾತಿಯು ಸರ್ವೇ ನಂಬರ್ 69 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸರ್ವೇ ನಂಬರ್ 69 ರಲ್ಲಿ ಮಾರಾಟ ಮಾಡಿರುವ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಿದ್ದು ಅಲ್ಲದೇ ಇದ್ದರೂ ನಾವು ಅದನ್ನು ಪ್ರಶ್ನೆ ಮಾಡಿದ್ದೇವೆ ಎಂದರೆ ಸರಿ. ನಿಪಿ2 ರ ಪ್ರಕಾರ ದಾವಾ ಸರ್ವೇ ನಂಬರ್ 69 ಕ್ಕೆ ಸಂಬಂಧಪಟ್ಟಂತೆ 15 ಲಕ್ಷಕ್ಕೆ ಕ್ರಯದ ನಿಷ್ಕರ್ಷ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾವು ಈ ದಾವೆಯಲ್ಲಿ 1 ರಿಂದ 4 ನೇ ಪ್ರತಿವಾದಿಗಳು ನಮಗೆ ಸೇರಿದ ಜಮೀನಿನ ಚಕ್ಕುಬಂದಿಯನ್ನು ಸೇರಿಸಿ ಕ್ರಯ ಮಾಡಿದ್ದಾರೆ ಆದ್ದರಿಂದ ಅದನ್ನು ರದ್ದು ಮಾಡಬೇಕೆಂದು ಸಲ್ಲಿಸಿದ್ದೇವೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.